ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:65/2016

ಚಾಸಾಃ12 ಪ್ರಾಸಾಃ8

ದಿನಾಂಕಃ 15.03.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಉದಯ ಕುಕಮಾರ್ |
| ತಂದೆಯ ಹೆಸರು | : | ರಾಮು |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಗ್ರಾಮ ಪಂಚಾಯಿತಿಯ ಕಾರ್ಯದರ್ಶಿ |
| ವಾಸ ಸ್ಥಳ | : | ಗಂಗೊಳ್ಳಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ**

ಸಾಕ್ಷಿಗೆ ನಿಪಿ-2 ಮತ್ತು 3ನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-2(ಸಿ) ಮತ್ತು ನಿಪಿ-3(ಸಿ) ಎಂದು ಗುರುತಿಸಲಾಯಿತು. ಸದ್ರಿ ಸಹಿಯನ್ನು ದಿಃ 04-10-2015ರಂದು ಚಾಸಾ1ರವರ ಮನೆ ಬಳಿ ಪೊಲೀಸರು ಬಂದಿದಾಗ ಮಾಡಿರುತ್ತೇನೆ. ಜಾಗವನ್ನು ಚಾಸಾ-1 ರವರು ತೋರಿಸಿರುತ್ತಾರೆ. ಆ ವೇಳೆಗೆ ಅವರ ವಿವಾಹದ ಆಮಂತ್ರಣ ಪತ್ರ, ಮದುವೆ ಪೋಟೋಗಳು ಮತ್ತು ಪಾಸ್ ಪುಸ್ತಕಗಳನ್ನು ಹಾಜರುಪಡಿಸಿರುತ್ತಾರೆ. ಪಂಚನಾಮೆಯನ್ನು ಸಂಜೆ 6 ರಿಂದ 6-30ರವರೆಗೂ ಜರುಗಿಸಿರುತ್ತಾರೆ.

ಸಾಕ್ಷಿ ವಿವಾಹದ ಆಮಂತ್ರಣ ಪತ್ರ, 3 ಪೋಟೋ ಹಾಗೂ ಪಾಸ್ ಪುಸ್ತಕಗಳನ್ನು ನೋಡಿ ಗುರುತಿಸಿದ ಮೇರೆಗೆ ದಾಖಲೆಗಳನ್ನು ನಿಪಿ-7 ರಿಂದ 11 ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-6 ರಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಆರ್ ಎಂ ಎಸ್ ರವರಿಂದಃ**

ನಮ್ಮ ಮನೆ ಗಂಗೊಳ್ಳಿಯ ಮುಖ್ಯ ರಸ್ತೆಯಲ್ಲಿ ಇದೆ. ಅಲ್ಲಿಂದ ಸ್ಥಳ ಪಂಚನಾಮೆ ಜರುಗಿಸಿದ ಸ್ಥಳ 100 ಮೀಟರ್ ಇರುತ್ತದೆ. ಪೊಲೀಸರು ಪಂಚನಾಮೆಗೆ ಹಾಜರಾಗಲು ತಿಳಿಸಿದ್ದು ಯಾವುದೇ ಲಿಖಿತ ನೋಟಿಸು ನೀಡಿಲ್ಲ. ಪೊಲೀಸರು ತಿಳಿಸಿದ ಮೇರೆಗೆ ಘಟನೆ ಬಗ್ಗೆ ತಿಳಿದಿರುತ್ತದೆ. ಘಟನೆಯ ಬಗ್ಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ. ಪೊಲೀಸರು ಸೂಚಿಸಿದಂತೆ ಸಹಿ ಮಾಡಿರುತ್ತೇನೆ. ಚಾಸಾ-1 ನಮ್ಮ ಪಕ್ಕದ ಮನೆಯವರಾದ ಕಾರಣ ಸಾಕಷ್ಟು ವರ್ಷದಿಂದ ಪರಿಚಯ. ಆದ ಕಾರಣ ಆಕೆಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**